ಸಿಸಿ ನಂ.283/2016

ಚಾಸಾ-14 ಪ್ರಾಸಾ-13

ದಿನಾಂಕ :26.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಎ.ಬಿ.ಎಂ. ವಕೀಲರಿಂದ

ನಾನು ನೀಡಿರುವ ವರದಿಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ದಿನಾಂಕ ನಮೂದು ಮಾಡಿರುವುದಿಲ್ಲ. ಗೌರ(ಬಿ) ಗ್ರಾಮಕ್ಕೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲನೆ ಮಾಡುವಾಗ ಯಾವುದೇ ಸಾಕ್ಷಿಯನ್ನು ಕರೆಯಿಸಿ ಪಂಚನಾಮೆ ಮಾಡಿಲ್ಲ. ನನ್ನ ವರದಿಯಲ್ಲಿ ಸದರಿ ಗ್ರಾಮಕ್ಕೆ ಭೇಟಿ ಕೊಟ್ಟ ಬಗ್ಗೆ ಭಾವಚಿತ್ರಗಳನ್ನು ತೆಗೆದು ಲಗತ್ತಿಸಿರುತ್ತೇನೆ. ಸದರಿ ಭಾವಚಿತ್ರದಲ್ಲಿ ದಿನಾಂಕ ನಮೂದಾಗಿರುವುದಿಲ್ಲ. ನಾನು ನೀಡಿರುವ ವರದಿಯಲ್ಲಿ ಕಾಮಗಾರಿಗಳು ಮುಗಿದಿದ್ದು ಉತ್ತಮವಾಗಿರುತ್ತವೆ ಎಂದು ನಮೂದು ಮಾಡಿರುತ್ತೇವೆ .

ಕೆಲಮೊಂದು ಕಾಮಗಾರಿಗಳು ಬಾಕಿ ಇದ್ದು , ಅವುಗಳಗೆ ಹಣವನ್ನು ಸಹಾ ಬಿಡುಗಡೆ ಮಾಡಿರುವುದಿಲ್ಲ. ಕೂಲಿ ಮಾಡಿರುವವರ ಖಾತೆಗೆ ಹಣವನ್ನು ಜಮೆ ಮಾಡಿರುತ್ತಾರೆ ಎಂದರೆ ಸರಿ. ಸಾಮಗ್ರಿಗಳನ್ನು ಕೊಟ್ಟವರ ಖಾತೆಗೆ ಹಣವನ್ನು ಜಮೆ ಆಗಿರುತ್ತವೆ ಎಂದರೆ ಸರಿ. ಕಾಮಗಾರಿಗಳ ಬಗ್ಗೆ ಹಣ ಜಮೆ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಮ್ಮ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶ್ರೀ ಟಿಎಚಎಂ ಕುಮಾರ ರವರು 2014 ನೇ ಸಾಲಿನಲ್ಲಿ ಅಫಜಲಪೂರ ತಾಲೂಕಿನ ಗೌರ(ಬಿ) ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಪರಿಶೀಲಿಸಿ ವರದಿ ನೀಡುವಂತೆ ನನಗೂ ಹಾಗೂ ಅಫಜಲಪೂರದಲ್ಲಿ ತಾಂತ್ರಿಕ ಸಹಾಯಕ ಎಂದು ಕೆಲಸ ಮಾಡುತ್ತಿದ್ದ ಶ್ರೀ ವಿಶ್ವನಾಥ ಜೋಶಿ ರವರಿಗೆ ಆದೇಶಿಸಿದ್ದು, ನಾನು ಹಾಗುಾ ಅವರು 2014 ರಲ್ಲಿ ಸದರಿ ಗೌರ(ಬಿ) ಗ್ರಾಮಕ್ಕೆ ಹೋಗಿ ಸುಮಾರು 35 ಕಾಮಗಾರಿಗಳನ್ನು ಪರಿಶಿಲನೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನಮ್ಮ ಸಿ.ಇ.ಓ ರವರ ಮಾತನ್ನು ಕೇಳಿ ಕಚೇರಿಯಲ್ಲಿ ಕುಳಿತು ಸುಳ್ಳು ವರದಿಯನ್ನು ತಯ್ಯಾರಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>**-<u>ಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು **)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ